ವೃತ್ತಿಯಲ್ಲಿ ಸುದ್ದಿಮನೆಗೆ ಅಂಟಿಕೊಂಡಿದ್ದರೂ ಕಥೆಗಳನ್ನು ಬರೆಯುವುದು, ಹೇಳುವುದು ಅಲಕ ಕಟ್ಟೆಮನೆ ಯವರ ಪ್ರವೃತ್ತಿ. 'ಶಾಲ್ಮಲೆಯ ಹೊನಲಲ್ಲಿ' ಮತ್ತು 'ಹೊರಳು ಹಾದಿಯ ನೋಟ' ಎಂಬ ಎರಡು ಕಥಾಸಂಕಲನಗಳು ಪ್ರಕಟಗೊಂಡಿವೆ. ಯಕ್ಷಗಾನವೂ ಆಸಕ್ತಿಯ ಕ್ಷೇತ್ರವೇ. ಪ್ರಸ್ತುತ ಮೈಸೂರಿನಲ್ಲಿ ವಾಸ.

ಎಂಬ ನನ್ನ ಮಾತಿಗೆ ಪೇಲವ ನಗೆ ನಕ್ಕನಷ್ಟೆ. 'ನಿನ್ನೆ ಕೇಳಿದ್ನಲ, ಆ ಜಾಗಕ್ಕೆ ಒಂದ್ಸಾರಿ ಹೋಗೂದನಾ? ನೀ ದೂರದಲ್ಲೇ ನಿಲ್ಲು, ನಾ ಒಬ್ಬೇ ಹತ್ರೋಗಿ ಬತ್ತೆ...' ನನ್ನ ಮಾತಿನ್ನೂ ಮುಗಿದಿರಲಿಲ್ಲ; ಅಷ್ಟರೊಳಗೇ ಬೊಮ್ಮಜ್ಜ ಕೆಂಡಾಮಂಡಲವಾಗಿದ್ದ. 'ಅಮಾ, ಈ ಬೊಮ್ಮಜ್ಜನ್ ಬೊಜ್ಜ ಮಾಡೂಕೆ ಬಂದೀರಿ ಕಾಣ್ತದೆ ನೀವು. ಈ ಗುಂಡಿ ಸುದ್ದೀಗ್ ಹೋದ ನಮ್ಮದೇ ಎಲ್ಡಾಳು ಗತಿ ಕಂಡ್ರು. ಇರ್ಳ್ ಕಂಡ್ ಬಾವೀಗ್ ಹಗ್ಲ್ ಬೀಳೂಕೆ ನಂಗೆಂತ ಸಮ ಇಲ್ಲ ಮಾಡಿದ್ರಾ. ಹಚ್ಯಾ... ಹಡ್ಬೆಗ್ ಹುಟ್ಟಿದ್ದೆ! ಇನ್ ಬೊಗಳೀರೆ ನಿನ್ ಹುಗ್ದ್ ಹಾಕ್ತೆ... ಇದೊಂದ್ ಸುದ್ದಿ ನನ್ ಕೂಡ್ ತೆಗೂದ್ ಬ್ಯಾಡ ಅಮ...' ಎಂದ ಬೈದಿದ್ದು ನನಗೋ ಕುನ್ನಿಗೋ ಅರ್ಥವಾಗದ ರೀತಿಯಲ್ಲಿ. ಅದನ್ನೇ ಮುಂದುವರಿಸಿ ಏನೇನೋ ಒದರುತ್ತಾ ಬಿಡಾರದೊಳಗೆ ನಡೆದ. ನಂತರ ಎಷ್ಟೊತ್ತು ಕಾದರೂ ಆತ ಹೊರಗೇ ಬರಲಿಲ್ಲ. ಇನ್ನು ಈ ವಿಷಯಕ್ಕೆ ತಮ್ಮನೆಯ ಬಾಗಿಲಿಗೆ ಬರುವುದೇ ಬೇಡ ಎಂದು ಕಡ್ಡಿ ತುಂಡರಿಸಿದಂತೆ ಮನೆಯ ಹೆಂಗಸರ ಬಳಿ ಹೇಳಿ ಕಳಿಸಿದ್ದ. ನಂತರ ಆತ ಮನೆಯಿಂದಲೂ ಕೆಲದಿನ ಕಣ್ಮರೆಯಾಗಿದ್ದ.

ಈ ವರ್ಷ ಮತ್ತೆ ಅದೇ ಜಡ್ಡಿಗದ್ದೆಯತ್ತ ಜೀಪೋಡಿಸುತ್ತಿದ್ದೆ.

* * *

ಕೇಜಿಯಣ್ಣನ ಮನೆಗೆ ಬಂದಿಳಿದಾಗ ಸಂಜೆಯ ನಾಲ್ಕು ಗಂಟೆ. ಕೋಕಂ ರಸ ತೆಗೆಯುವ ಕಾಯಕದಲ್ಲಿ ಆತನ ಕುಟುಂಬ ನಿರತವಾಗಿತ್ತು. ಕೇಜಿಯಣ್ಣನ ಹೆಂಡತಿ, ಮಗಳೊಂದಿಗೆ ಇನ್ನೊಬ್ಬಳು ಹುಡುಗಿಯೂ ಇದ್ದಳು. ಯಾರೋ ನೆಂಟರ ಕೂಸಿರಬೇಕು. ಅಲ್ಲಿಗೆ ಹೋದ ಎರಡು ಘಳಿಗೆಯಲ್ಲಿ ಅವರೊಂದಿಗಿನ ಕೆಲಸಕ್ಕೆ ನಾನೂ ಕೈಜೋಡಿಸಿದೆ. ಅಷ್ಟರಲ್ಲೇ 'ಹೊನ್ನೆ ತುಪ್ಪ!' ಎನ್ನುತ್ತಾ ಕೇಜಿಯಣ್ಣನ ಪ್ರವೇಶವಾಯಿತು. ಎಂಟು ವರ್ಷಕ್ಕೊಮ್ಮೆ ಮಾತ್ರವೇ ಸಿಗುವ ಜೇನಿದೆಂದು ಹೇಳಿದ ಆತ, ರಟ್ಟಿನ ಸಮೇತ ಜೇನುತುಪ್ಪವನ್ನು ಕೈಗಿತ್ತ. ಮಧು ಒಸರುತ್ತಿದ್ದ ಜೇನುರಟ್ಟು ಜಗಿಯುತ್ತಾ, ಈ ಬಾರಿಯ ಭೇಟಿಯ ಪಟ್ಟಿಯಲ್ಲಿ ಏನೇನಿದೆ ಎಂಬುದರ ಚರ್ಚೆ ನಡೆಯುತ್ತಿತ್ತು. ಕಡೆಯಲ್ಲಿ ಅನುಮಾನದಿಂದ ಅವನಲ್ಲಿ ಕೇಳಿದೆ- 'ಬೊಮ್ಮಜ್ಜ ಹ್ಯಾಂಗಿದ್ದ?'

'ಬೊಮ್ಮಜ್ಜನ ಸುದ್ದಿ ಬೇಕಿದ್ರೆ ಈ ತಂಗಿ ಹತ್ರೆ ಕೇಳು. ಬೊಮ್ಮಜ್ಜನ ಮೊಮ್ಮಗಳು ಇದು' ಎನ್ನುತ್ತಾ ನಮ್ಮೊಂದಿಗೆ ಕೋಕಂ ಬಿಡಿಸುತ್ತಿದ್ದ ಹುಡುಗಿಯನ್ನು ತೋರಿಸಿದ. ಅರೆ! ಇಷ್ಟೊತ್ತು ಇವಳೊಂದಿಗೇ ಹರಟುತ್ತಿದ್ದರೂ ಆಕೆ ಬೊಮ್ಮಜ್ಜನ ಮೊಮ್ಮಗಳು ಎಂಬುದು ಗೊತ್ತೇ ಆಗಲಿಲ್ಲ. 'ಹತ್ತನೇ ಕ್ಲಾಸಿನಲ್ಲಿ ಇವಳು ಶಾಲೆಗೇ ಫಸ್ಟು. ಈಗಿನ್ನು ಪಿಯುಸಿ. ಇವರ ಇಡೀ ಕುಟುಂಬದಲ್ಲಿ ಕಾಲೇಜು ಕಂಡಿದ್ದು ಇವಳೇ ಫಸ್ಟು' ಎಂದು ಅಭಿಮಾನದಿಂದ ಹೇಳಿದ ಕೇಜಿಯಣ್ಣ. ಬೊಮ್ಮಜ್ಜನಿಗೆ ಮೂರು ಹೆಣ್ಣು, ಎರಡು ಗಂಡು ಮಕ್ಕಳು. ಅವರಲ್ಲಿ ಕೊನೆಯ ಮಗ ರಾಮುವಿನ ಮಗಳಿವಳು. ಹೆಸರೇನೆಂದು ಕೇಳಿದರೆ 'ಲಲಿತಾ' ಎಂದಳು ಬಿಗುಮಾನವಿಲ್ಲದೆ. ಬೊಮ್ಮಜ್ಜನ ಮನೆ ತುಂಬಾ ಮೊಮ್ಮಕ್ಕಳಿದ್ದರೂ ಒಬ್ಬರೂ ಕಾಲೇಜು ಮೆಟ್ಟಿಲು ಹತ್ತಲಿಲ್ಲವೇ ಎಂದು ಅಚ್ಚರಿಯಾಯಿತು. ಹೋಗ್ಲಿ, ಇವಳಾದರೂ ಮುಂದೆ ಓದುತ್ತಿದ್ದಾಳಲ್ಲ ಎಂಬ ಸಮಾಧಾನವೂ ಆಯಿತು.

ಮರುದಿನದಿಂದ ಲಲಿತೆ ನನ್ನ ಹೊಸ ಒಡನಾಡಿ. ಅರಳುಗಣ್ಣಿನ ಚುರುಕು ನಗೆಯ ಈ ಕಿಶೋರಿ, ಪಟಪಟನೇ ಮಾತಾಡುತ್ತಾ, ಚಿಗರೆಯಂತೆ ಕಾಡು ತಿರುಗುವ ಪೋರಿ. ಯಾವುದೋ ಮರ, ಅದರ ಹಣ್ಣು, ಹಣ್ಣಿನ ರುಚಿ, ಅದನ್ನು ತಿಂದ ಮೇಲಾಗುವ ಪರಿಣಾಮ- ಹೀಗೆ ಒಂದಿಷ್ಟನ್ನು ಬಲ್ಲವಳು. ಯಾವುದೇ ಮರವನ್ನೂ ಮಂಗನಂತೆ ಹತ್ತುತ್ತಿದ್ದಳು. ಜೋತಾಡುವ ಬಳ್ಳಿಯೊಂದಿಗೆ ತಾನೂ ಜೋತಾಡುತ್ತಾ ಮೋಜು ಮಾಡುತ್ತಿದ್ದಳು. ತಾನು ಮತ್ತು ಕಾನು- ಇವೆರಡೂ ಬೇರೆ ಎಂದು ಇವರ್‍ಯಾರೂ ಭಾವಿಸಿಯೇ ಇಲ್ಲವಲ್ಲ, ಇಂಥವರು ಈಗಲೂ ಇದ್ದಾರಲ್ಲ ಎಂದು ನನ್ನಷ್ಟಕ್ಕೇ